ಗಮನಿಸಿದ. ಕೆಲವರ ಮುಖದಲ್ಲಿ ನಿರೀಕ್ಷೆ ಇತ್ತು. ಹುರುಪು ಬಂತು. ಮಕ್ಕಳ ಗುಂಪಿನತ್ತ ನೋಡುತ್ತ, 'ನನ್ನ ಹೆಸರು ವೀರೇಶ ಹಂಪಿ. 23 ವರ್ಷಗಳಿಂದ ಗೈಡ್ ಆಗಿ ಕೆಲಸ ಮಾಡ್ತಿದ್ದೀನಿ. ಪರಂಪರೆಯ ತಾಣ ಹಂಪಿಗೆ ನಿಮಗೆ ಸ್ವಾಗತ' ಅಂದ. ಮಕ್ಕಳೆಲ್ಲರೂ ಉತ್ಸಾಹದಿಂದ ಪ್ರತಿಕ್ರಿಯಿಸಿದರು.

ದೇವಸ್ಥಾನದೊಳಗೆ ಸುತ್ತುತ್ತಾ ವಿಜಯನಗರವನ್ನಾಳಿದ ವಂಶಾವಳಿಯ ವಿವರವಿರುವ ತಾಮ್ರದ ಫಲಕದೆದುರು ಬಂದರು. ಅಲ್ಲಿ ಮಕ್ಕಳನ್ನು ನಿಲ್ಲಿಸಿ ವೀರೇಶ, ವಿಜಯನಗರವನ್ನಾಳಿದ ರಾಜರ ಮಾಹಿತಿ ಕೊಡುತ್ತ, ಶೈವ ವಂಶದಿಂದ ವೈಷ್ಣವ ವಂಶ ಆಡಳಿತ ಸುರು ಮಾಡಿದಾಗ ದೊರೆಗಳು ಜನರ ನಡುವೆ ನಡೆಯುತ್ತಿದ್ದ ಶೈವ, ವೈಷ್ಣವ ಸಂಘರ್ಷ ತಪ್ಪಿಸಲು ಅನುಸರಿಸುತ್ತಿದ್ದ ಸಾಮರಸ್ಯ ನೀತಿಯಿಂದಾಗಿ ಇಲ್ಲಿ ವಿರೂಪಾಕ್ಷನಿದ್ದಾನೆ. ವಿಠಲನಿದ್ದಾನೆ. ಇಂದಿನ ರಾಜಕಾರಣಿಗಳು ಜನರನ್ನು ಸಾಮರಸ್ಯದಿಂದ ಬಾಳಿಸುವುದು ಹೇಗೆ ಅಂತ ವಿಜಯನಗರದ ಅರಸರನ್ನು ನೋಡಿ ಕಲೀಬೇಕು ಅನ್ನುತ್ತಿದ್ದಂತೆ, 'ಈ ಪುರಾಣ ಎಲ್ಲ ಬೇಡ. ಇತಿಹಾಸ ಹೇಳಿ ಸಾಕು.' ಮಕ್ಕಳ ಜೊತೆಗಿರುವ ಅಧ್ಯಾಪಕರಿಂದ ಅನಿರೀಕ್ಷಿತ ಪ್ರತಿಕ್ರಿಯೆ ಬಂದಿತ್ತು. 'ಇದರಲ್ಲಿ ಪುರಾಣ ಎಲ್ಲಿದೆ ಸರ್. ಇದೇ ಇತಿಹಾಸ. ಮಕ್ಕಳಿಗೆ ತಿಳಿದಿರಬೇಕಾದ್ದು. ಆ ಅಧ್ಯಾಪಕ ವೀರೇಶನಿಗೆ ಮಾತು ಪೂರ್ತಿ ಮಾಡಲು ಬಿಡದೆ, 'ಗೈಡ್ ಅಂತ ಬರ್ತೀರಿ. ಯಾವು ಯಾವುದೋ ಪುರಾಣ ಹೇಳ್ತೀರಿ. ಐದನೇ ಕ್ಲಾಸ್ ಮಕ್ಳಿಗೆ ಕೇಳಿದ್ರೂ ಬಿಜಾಪುರದ ಸುಲ್ತಾನರು ನಮ್ಮ ವಿಜಯನಗರ ಅರಸರನ್ನು ಸೋಲಿಸಿದ್ದು... ಹಂಪಿಯನ್ನು ಸುಟ್ಟುಹಾಕಿದ್ದು... ವಿಗ್ರಹ ನಾಶ ಮಾಡಿದ್ದು ಅಂತ ಇಲ್ಲಿಯ ಇತಿಹಾಸ ಹೇಳ್ತಾರೆ' ಅಂದ.

'ಹಂತಹಂತವಾಗಿ ವಿವರಿಸ್ತಿದ್ದೆ ಸರ್. ಇದೆಲ್ಲ ಆದ್ಮೇಲೆ ಅಲ್ವಾ ಅದೆಲ್ಲ ಆಗಿದ್ದು. ಸುಲ್ತಾನರು ಬಂದಿದ್ದು. ಯುದ್ಧ ಸೋತ ಸುದ್ದಿ ಬರ್ತಿದ್ದ ಹಾಗೆ ನಮ್ಮ ಅರಸರ ವಂಶದವರು ಸಂಪತ್ತಿನ ಸಮೇತ ಗುಟ್ಟಾಗಿ ಇಲ್ಲಿಂದ ಪಲಾಯನ ಮಾಡಿದ್ದು... ಕೊಳ್ಳೆ ಹೊಡೆಯಲು ಬಂದ ಸುಲ್ತಾನರ ಸೈನಿಕರಿಗೆ ಅವರು ನಿರೀಕ್ಷೆ ಮಾಡಿದ್ದು ಸಿಗದೇ ಕೋಪದಿಂದ ಎಲ್ಲ ನಾಶ ಮಾಡಿದ್ದು...' ವೀರೇಶ ಮನ ಒಲಿಸಿ ವಿವರಿಸಲು ಪ್ರಯತ್ನಿಸಿದರೆ ಆತ, 'ನೀವೊಳ್ಳೆ ಏಜೆಂಟ್ ಥರ ಮಾತಾಡ್ತೀರಲ್ರಿ. ನಡೀರೋ ಮುಂದೆ' ಅನ್ನುತ್ತಾ ಕೈಯಲ್ಲಿದ್ದ ಸೀಟಿ ಊದಿದ್ದಲ್ಲದೆ ದಬ್ಬುವಂತೆ ಸಮೀಪದಲ್ಲಿದ್ದ ಮಕ್ಕಳನ್ನು ಮುಂತಳ್ಳುತ್ತ ನಡೆದ. ಉಳಿದಿಬ್ಬರು ಅಧ್ಯಾಪಕರೂ ನಡೀರೋ ಅನ್ನುತ್ತ ಮುನ್ನಡೆದರು. ಕಕ್ಕಾಬಿಕ್ಕಿಯಾದ ವೀರೇಶ ಅಲ್ಲೇ ನಿಂತ. ಮುಜುಗರವಾಗುವಂಥ ಸಂದರ್ಭಗಳು ಅವನಿಗೆ ಹೊಸದಲ್ಲ. ಆದರೆ, ಈ ರೀತಿ ಎಂದೂ ಆಗಿರಲಿಲ್ಲ. ಅವನು ಗೈಡ್ ಮಾಡಿದ ಪ್ರವಾಸಿಗಳ ತಂಡದಿಂದ ಅವನಿಗೆ ಹೊಗಳಿಕೆ ಸಿಕ್ಕಿದ್ದೂ ಇದೆ. ಹೊಗಳಿಕೆ ಸಿಕ್ಕಿದಾಗ ಅವನೆದೆ ಆ ಪ್ರವಾಸಿಗಳ ಬಗ್ಗೆ ಅಭಿಮಾನದಿಂದ ತುಂಬಿದಂತಾಗುತ್ತಿತ್ತು. ಬ್ರೀಫ್ ಆಗಿ ಹೇಳಿ ಮುಂದಕ್ಕೆ ಹೋಗಲು ತಿಳಿಯದವನು ಎಂದು ಬೈಗುಳ ಸಿಕ್ಕಿದ್ದೂ ಇದೆ. ಆಗಲೂ ಅದೇ ಪ್ರವಾಸಿಗಳ ಬಗ್ಗೆ ಬೇಸರವಾಗುವುದೂ ಇದೆ. ಆದರೆ ಇದು ಮಾತ್ರ ಹೊಸ ನಮೂನೆ. ಆ ಅಧ್ಯಾಪಕನ ಮುಖಕ್ಕೆ ಕ್ಯಾಕರಿಸಿ ಉಗಿಯಬೇಕೆನಿಸಿತು. ಗುರುಗಳನ್ನು ನೆನೆಸಿಕೊಂಡ.

'ಹನುಮಂತ ಲಂಕೆಯನ್ನು ಯಾಕೆ ಸುಟ್ಟ?' ಸದಾನಂದ ಮೂರ್ತಿಗಳು ಗೈಡ್ ತರಬೇತಿಯ ಕೊನೆಯ ದಿನ ಅಂಜನಾದ್ರಿ ಬೆಟ್ಟದ ಮೇಲೆ ಕುಳಿತಿದ್ದಾಗ ಬೀಳ್ಕೊಡುವ ಮೊದಲು ಕೇಳಿದ ಪ್ರಶ್ನೆಯಾಗಿತ್ತು ಅದು. ಒಂದು ಚಣ ಮೌನ. ನಂತರ ಒಬ್ಬೊಬ್ಬರು ಒಂದೊಂದು ಉತ್ತರ ಕೊಟ್ಟರು. ಎಲ್ಲವು ರಾವಣ, ಸೀತೆಯನ್ನು ಕದ್ದುಕೊಂಡು ಹೋಗಿದ್ದು... ಅಶೋಕ ವನದಲ್ಲಿ ಸೀತೆಯ ದುಃಖ ನೋಡಿದ್ದಕ್ಕೆ... ರಾವಣನ ದುರಹಂಕಾರ ಮುರಿಯಲು... ಹೀಗೆ ಒಂದೊಂದು ಉತ್ತರ ಕೊಟ್ಟರು. ಇದೆಲ್ಲ ನೀವು ರಾಮ– ಸೀತೆಯ ಪಕ್ಷಪಾತಿಗಳಾಗಿ ಹೇಳುವ ಉತ್ತರ ಅಂದಾಗ ವೀರೇಶ ಥಟ್ಟನೆ, 'ಬಾಲಕ್ಕೆ ಬೆಂಕಿ ಹಚ್ಚಿದ್ದಕ್ಕೆ' ಅಂದಿದ್ದ. ಎಲ್ಲರೂ ಗೊಳ್ಳನೆ ನಕ್ಕಿದ್ದರು. 'ನೀನು ಹೇಳಿದ್ದು ಒಂದಂಶ ಸರಿ. ಹನುಮಂತನಿಗೆ ಅವನ ಬಾಲಕ್ಕೆ ಬೆಂಕಿ ಹಚ್ಚುವವರೆಗೂ ಲಂಕೆಯನ್ನು ಸುಡುವ ಉದ್ದೇಶ ಇರಲಿಕ್ಕೆ ಸಾಧ್ಯ ಇಲ್ಲ ಅಲ್ವೆ?. ಅಲ್ಲಿ ಒಂದೊಂದು ಕ್ರಿಯೆ ನಡೀತಾ ಹೋದ

